ಕಥೆ



**ಅಮರೇಶ ನುಗಡೋಣಿ**

ಕಲೆ: ವಿಶ್ವನಾಥ ಎ.ಎಸ್.

# ಭವದ ಕೈಲಾಸ

**1**

ಬೆಳಗಿನ ಹೊತ್ತು; ಚಂದ್ರಕಾಂತಯ್ಯ ತನ್ನ ನಿತ್ಯಕರ್ಮಗಳನ್ನು ಮುಗಿಸಿ, ಲಿಂಗಪೂಜೆ ಮಾಡಿಕೊಂಡು ಅಡುಗೆ ಮನೆಯಿಂದ ಪಡಸಾಲೆಗೆ ಬಂದ. ಅಲ್ಲಿ ಅಂಗಿ-ಪಂಚೆ ತೊಡುತ್ತ 'ಆರಂಭ ಮಾಡುವೆ ನಾನು...' ಎಂಬ ವಚನವನ್ನು ಹಾಡುತ್ತ, ತಲಬಾಗಿಲನ್ನು ತೆರೆಯಲು ಪಡಸಾಲೆಯಿಂದ ಇಳಿದು, ಅಂಕಣಗಳನ್ನು ದಾಟಿ ಬಂದು ಬಾಗಿಲುಗಳನ್ನು ತೆರೆದನು. ಬಾಗಿಲ ಆಚೆ ನಿಂತಿದ್ದ ಶಿವರುದ್ರಯ್ಯ ಎಡಗಡೆಯ ಬಂಕದ ಕಡೆ ನೋಡುತ್ತ ನಿಂತಿದ್ದನ್ನು ನೋಡಿ ಗಾಬರಿಯಿಂದ 'ಅರೇ ಶಿವಯ್ಯ, ಹೊರಗ ನಿಂತಿದ್ದಿ?' ಎಂದು ಕೇಳಿದ. ಆತ ಬಂಕದಲ್ಲಿದ್ದ ಕಪ್ಪು ಹಲಗೆ ಮ್ಯಾಲೆ ಬರೆದಿದ್ದ ವಚನವನ್ನು ಓದುತ್ತಿದ್ದ. ಚಂದ್ರಕಾಂತಯ್ಯನಿಗೆ ಅದು ನಿನ್ನೆ ಮುಸ್ಸಂಜೆ ವ್ಯಾಳೆದಲ್ಲಿ ತಾನು ಮನೆಗೆ ಬರುವುದರಾಗ ಹೆಂಡತಿ ಮಾಂತಮ್ಮ ಬರೆದಿದ್ದಳು! ಚಂದ್ರಕಾಂತಯ್ಯ ಬರೆದದ್ದೆಂಬ ಸಹಜ ತಿಳಿವಳಿಕೆಯಿಂದ ಓದುತ್ತ ಹತಾಶೆ ಭಾವದಿಂದ 'ದೊಡ್ಡಪ್ಪ, ಈಗ ಬಂದೆ. ಬಾಗಲು ಬಡದು ಕರೀಬೇಕು ಅನ್ನದ್ರಾಗ... ಎದ್ದಿರಿ ಅಂದಗಾಯ್ತು' ಎಂದು ಚಂದ್ರಕಾಂತಯ್ಯನಿಂದ ಮನೆಯೊಳಗ ಬಂದ. ಪಡಸಾಲೆಯಲ್ಲಿ ಚಾಪೆ ಮ್ಯಾಲೆ ಕುಂತರು.

'ಅಕ್ಕ ಮಾಂತಮ್ಮ...' ಎಂದು ಕೇಳುತ್ತಿದ್ದನೋ 'ಬೇಸೈದಾಳ. ಎದ್ದು ಕೆಲ್ಸಕ್ಕ ನಿಂತಾಳ. ಅಂದಂಗ ಇಷ್ಟು ಹೊತ್ತಿಗೆ ಬಂದಿದ್ದಿ? ಸೌದು ಸಿಕ್ಕದಲ್ಲ?' ಎಂದು ಚಂದ್ರಕಾಂತಯ್ಯ ಕೇಳಿದ.

'ನಿನ್ನೆಯೇ ಸಣ್ಣವರು ಹೋಗಿ ಹೇಳಿ ಬಾ ಅಂದಿದ್ದರು. ನನಗ ಪುರುಸೊತ್ತಾಗಲಿಲ್ಲ. ಶಿವಲಿಂಗನಿಗೆ ಓಡಿ ಹೋಗಿ ಬಂದು ಬಿಡು ಅಂತ ನಾನೇ ಹೇಳಿದ್ದೆ. ಅವ್ನೂ ಕೆಲ್ಸದಾಗ ಮುಳುಗಿದ್ದ. ಅದ್ಕ ಈಗ ನಾನೇ ಬಂದೆ' ಎಂದು ಹೇಳಿದ.

ಶಿವರುದ್ರಯ್ಯ ಈಗಲೂ ಮಠದ ಸೇವೆಯಲ್ಲಿರುವ ನಂಬಿಗೆಯ ಕೆಲ್ಸಗಾರ. ದೊಡ್ಡವರು ಲಿಂಗೈಕ್ಯರಾಗುವ ಆರೇಳು ವರ್ಷಗಳ ಪೂರ್ವದಲ್ಲಿ ಶಿವರುದ್ರಯ್ಯನನ್ನು ಮಠದ ಸೇವೆಗೆ ನಿಲ್ಲಿಸಿದ್ದು ಚಂದ್ರಕಾಂತಯ್ಯನೇ. ಮಠದ ದಾಸ್ತಾನು ನೋಡಿಕೊಳ್ಳುವ ಕೆಲ್ಸಕ್ಕೆ ಸೂಕ್ತ ವ್ಯಕ್ತಿಯಂತ ಅರಿತಿದ್ದ. ಈಗ್ಯ ಹದಿನೈದು ವರ್ಷಗಳಾಗಿರಬೇಕು ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದಾನೆ. ಆದರೆ ದೊಡ್ಡವರು ಲಿಂಗೈಕ್ಯರಾದರು. ಸಣ್ಣವರು ಪಟ್ಟಕ್ಕೆ ಬಂದರು. ಚಂದ್ರಕಾಂತಯ್ಯನೂ ಮಠದ ಜವಾಬ್ದಾರಿಗಳನ್ನು ದಿನದಿಂದ ದಿನಕ್ಕೆ ಕಮ್ಮಿ ಮಾಡಿಕೊಂಡು ದೂರವೇ ಸರಿದಿದ್ದ. ದೊಡ್ಡವರಿರುವ ತನಕ ಅವರ ಬಲಗೈಯಂತಿದ್ದ.

'ಸಣ್ಣವರು ಊರಾಗಿಲ್ಲೇನು?'

'ಮುಂಜಾನೆ ಜಿಲ್ಲಾ ಕೇಂದ್ರಕ್ಕೆ ಹೋದರು. ಬಿಜೆಪಿ ಶಾಸಕರನ್ನು ಕಂಡು ಮಧ್ಯಾಹ್ನಕ್ಕೆಲ್ಲ ಬರ್‍ತಾರಂತ. ದೊಡ್ಡಪ್ಪ, ನಿನ್ನನ್ನು ಸಂಜೆಕಡೆ ಮಠಕ್ಕ